ಮಾಡುವಷ್ಟು ಸಮಯ ನನಗೆ ಒದಗಲೇ ಇಲ್ಲ!'

ಇಂಥ ದೃಷ್ಟಾಂತಗಳು ನಮ್ಮನ್ನು ನಿದ್ದೆಯ ಸಮತಾವಾದಿ ರಾಜಕಾರಣದತ್ತ ಕರೆದೊಯ್ಯುತ್ತವೆ. ಎಚ್ಚರದ ಸ್ಥಿತಿಯಲ್ಲಿ ನಾವು ಬಡವ–ಬಲ್ಲಿದ, ಗಂಡು–ಹೆಣ್ಣು, ಬಿಳಿಯ–ಕರಿಯ, ಸವರ್ಣೀಯ–ದಲಿತ ಇತ್ಯಾದಿ ಏನೆಲ್ಲ ಆಗಿದ್ದರೂ ನಿದ್ದೆ ಬಂದಾದ ಮೇಲೆ ಎಲ್ಲ ಮನುಷ್ಯರೂ ಸಮಾನರೇ ಅಲ್ಲವೆ? ಇಂಥ ಆತ್ಯಂತಿಕ ಸಮಾನತೆಯ ಅರಿವು ಯಾವತ್ಕಾಲಕ್ಕೂ ಮನುಷ್ಯರಿಗೆ ಮರೆಯದಿರಲಿ ಎಂಬ ಕಾರಣಕ್ಕಾಗಿಯೇ ದಿನವೂ ನಿದ್ದೆ ಅಗತ್ಯವಾಗುವ ಹಾಗೆ ನಮ್ಮ ದೇಹಗಳನ್ನು ರೂಪಿಸಲಾಗಿದೆಯೆ? – ಇಂಥ ಪ್ರಶ್ನೆಗಳನ್ನೂ ನಿದ್ದೆ ಬಾರದ ವೇಳೆ ನಾನು ಕೇಳಿಕೊಂಡಿದ್ದೇನೆ. ಮಾತ್ರವಲ್ಲ, ಐಹಿಕ ಸುಖಭೋಗಗಳು ಹೆಚ್ಚಾದಷ್ಟೂ ನಿದ್ದೆ ಬರುವುದು ಕಡಿಮೆಯಾಗುವ ವಿಚಿತ್ರ ವಿದ್ಯಮಾನಗಳನ್ನು ನೋಡುವಾಗ ಹಲವು ಮೂಲಭೂತ ಪ್ರಶ್ನೆಗಳು ಏಳುತ್ತವೆ. ಸುಖವನ್ನು ನಿಜವಾಗಿಯೂ ಅಳೆಯುವುದಾದರೂ ಹೇಗೆ? ಬಡತನ ಮತ್ತು ಶ್ರೀಮಂತಿಕೆಗಳ ಸಾಪೇಕ್ಷ ನಿರ್ವಚನಕ್ಕೆ ಮಾನದಂಡವಾದರೂ ಯಾವುದು? – ಇವೇ ಮೊದಲಾದ ಪ್ರಶ್ನೆಗಳನ್ನಿಟ್ಟುಕೊಂಡು ಈಚೆಗೆ ಹಲವು ಧೀಮಂತರು ಹೊಸ ಬಗೆಯ ಯೋಚನೆಗಳನ್ನೂ ಮಾಡತೊಡಗಿದ್ದಾರೆ. ಸಾಂಪ್ರದಾಯಿಕ ಅಳತೆಗೋಲುಗಳ ಪ್ರಕಾರ ಒಂದು ದೇಶದ ಸಂಪತ್ತನ್ನು ಅದರ ಉತ್ಪಾದನೆಯ ಮೊತ್ತದ ಮೇಲೋ ಅಥವಾ ಅಲ್ಲಿಯ ಜನರು ವಸ್ತುಗಳನ್ನು ಬಳಸುವ ಪ್ರಮಾಣದ ಮೇಲೋ ಅಳೆಯುವುದು ಅಂತರರಾಷ್ಟ್ರೀಯವಾಗಿ ಚಾಲ್ತಿಯಲ್ಲಿರುವ ರೂಢಿ. ಅದಕ್ಕೆ ವಿರುದ್ಧವಾಗಿ, ಆಯಾ ದೇಶದ ಜನ ಎಷ್ಟು ಸುಖಿಗಳು ಎಂಬುದರ ಆಧಾರದ ಮೇಲೆ ಅಳತೆ ಮಾಡುವುದು ಹೆಚ್ಚು ಉಪಯುಕ್ತವಲ್ಲವೆ? ಈಗಿರುವ ಗ್ರಾಸ್ ನ್ಯಾಷನಲ್ ಪ್ರಾಡಕ್ಟ್(ರಾಷ್ಟ್ರದ ಪದಾರ್ಥಪ್ರಮಾಣ) ಎಂಬ ಅಳತೆಯ ಬದಲು ಗ್ರಾಸ್ ನ್ಯಾಷನಲ್ ಹ್ಯಾಪಿನೆಸ್(ರಾಷ್ಟ್ರದ ಸುಖಪ್ರಮಾಣ) ಎಂಬ ಹೊಸ ಅಳತೆಗೋಲನ್ನು ತರಬೇಕಲ್ಲವೆ? – ಎಂದು ಕೆಲವರಾದರೂ ಯೋಚಿಸಿದ್ದಾರೆ; ಭೂತಾನವೆಂಬ ಪುಟ್ಟ ದೇಶದ ಧೀಮಂತ ರಾಜ ಅಂಥ ಅಳತೆಗೋಲನ್ನು ತನ್ನ ದೇಶವನ್ನು ಅಳೆಯಲಿಕ್ಕೆ ಬಳಸಿದ್ದೂ ಸುದ್ದಿಯಾಗಿದೆ. ಸುಖದ ಅಳತೆಯ ಇಂಥ ಮಾನದಂಡಗಳಲ್ಲಿ ಅಲ್ಲಿಯ ಜನರು ಮಾತ್ರೆಗಳಾಗಲೀ ಅಮಲುಪದಾರ್ಥಗಳಾಗಲೀ ಇಲ್ಲದೆ ಎಷ್ಟು ಹೊತ್ತು ನಿದ್ರಿಸುತ್ತಾರೆ ಎಂಬ ಅಂಕಿಅಂಶವೂ ಸೇರಬಹುದು ಎಂದು ನನ್ನ ಊಹೆ. ಮತ್ತು ಇಂಥ ನಿದ್ರಾಸೂಚ್ಯಾಂಕದ ಮೂಲಕ ತುಲನೆ ಮಾಡಿದರೆ, ಈ ಜಗತ್ತಿನ ಮುಂದುವರೆದ–ಹಿಂದುಳಿದ ದೇಶಗಳ ಭೂಪಟವೇ ತಲೆಕೆಳಗಾಗುವಷ್ಟು ಬದಲಾದೀತು – ಎಂದೂ ನನಗನ್ನಿಸುತ್ತದೆ.

ಸಮಕಾಲೀನ ಜಗತ್ತಿನ ಅಂಥ ತಲೆಕೆಳಗು ಸ್ಥಿತಿಯನ್ನು ಗ್ರಹಿಸುವುದಕ್ಕೆ ಯಾವ ಸೈದ್ಧಾಂತಿಕ ಉಪಕರಣವೂ ಬೇಡವೆನ್ನುವಷ್ಟು ಅದು ನಿಚ್ಚಳವಾಗಿದೆ. ಉದಾಹರಣೆಗೆ, ನಿದ್ರೆ ಮಾತ್ರೆಗಳು ಬಹುಪಾಲು ಖರ್ಚಾಗುವುದು ಸಂಪತ್ತಿನಲ್ಲಿ ಮುಂದುವರೆದ ದೇಶಗಳಲ್ಲೇ ಎಂದು ಹಲವು ಸಮೀಕ್ಷೆಗಳು ತೋರಿಸಿವೆ. ಅಂಥ ನಿದ್ರಾಬಡತನದಿಂದ ನರಳುತ್ತಿರುವ ಇವತ್ತಿನ ಶ್ರೀಮಂತ ಪಾಶ್ಚಿಮಾತ್ಯರು, ಮಾತ್ರೆ–ಯಂತ್ರಗಳಿಂದೇನೂ ಉಪಯೋಗವಾಗದೆ, ಭಾರತವೇ ಮೊದಲಾದ ಪೂರ್ವದ ನಾಡುಗಳಿಂದ ನೆಮ್ಮದಿಯನ್ನೂ ನಿದ್ರೆಯನ್ನೂ ಕೊಂಡುಕೊಳ್ಳಲು ಆಸಕ್ತರಾಗಿ ಇಲ್ಲಿಯ ಹಲವು ಶ್ರೀಶ್ರೀಯುತರನ್ನು ಶ್ರೀಮಂತಗೊಳಿಸಿದ್ದಾರೆ. ನೆಮ್ಮದಿಯ ಮಾರಾಟದ ಇಂಥದೊಂದು ಮಧ್ಯವರ್ತೀ ಉದ್ಯಮವೀಗ, ವಿವೇಕ ಶಾನಭಾಗ ಅವರ ಕಥೆಯೊಂದು ಸೂಚಿಸುವಂತೆ, 'ಶರವಣ ಸರ್ವಿಸಸ್' ಆಗಿ ಬೆಳೆದಿದೆ; ಸೋತ ನಾಗರಿಕತೆಗಳು ಸೇಡು ತೀರಿಸಿಕೊಳ್ಳುವ ಒಂದು ವಿಕಟ ಮಾದರಿಯೋ ಇದು? – ಎಂದು ಭಾಸವಾಗುವ ಸ್ಥಿತಿಯೀಗ ಉಂಟಾಗಿದೆ.